# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 342 (2616)
2. ಸದಸ್ಯರ ಹೆಸರು : ಶ್ರೀ. ಕೆ. ಟಿ. ಶ್ರೀಕಂಠೇಗೌಡ (ಪದವಿಧರರ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 24-03-2022
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಮೆಟ್ರೋ ರೈಲು ನಿಗಮ(BMRCL) ವು ದಿನಾಂಕ:03.01.2019 ರಂದು ಎಷ್ಟು ಹುದ್ದೆಗಳಿಗೆ ನೇಮಕಾತಿಗಾಗಿ ಅರ್ಜಿ ಕರೆಯಲಾಗಿದೆ: (ಅಧಿಸೂಚನೆ ಪ್ರತಿಯನ್ನು ನೀಡುವುದು) | ಬೆಂಗಳೂರು ಮೆಟ್ರೋ ರೈಲು ನಿಗಮದ ದಿನಾಂಕ: 03.01.2019 ರ ಅಧಿಸೂಚನೆಯಲ್ಲಿ 174 ಹುದ್ದೆಗಳ ನೇಮಕಾತಿಗಾಗಿ ಅರ್ಜಿ ಕರೆಯಲಾಗಿತ್ತು. (ಅಧಿಸೂಚನೆಯ ಪ್ರತಿಯನ್ನು ಲಗತ್ತಿಸಿದೆ) |
| ಆ) | ಈ ಅಧಿಸೂಚನೆಯನ್ವಯ ಎಷ್ಟು ಜನರು ಅರ್ಜಿ ಸಲ್ಲಿಸಿದ್ದರು: ಪರೀಕ್ಷೆಗೆ ಹಾಜರಾದವರೆಷ್ಟು: ಇದರಲ್ಲಿ ಆಯ್ಕೆ ಹೊಂದಲು ಮೆರಿಟ್ ಪಡೆದವರು ಎಷ್ಟು; (ವಿವರವಾಗಿ ಹುದ್ದೆವಾರು, ಅಭ್ಯರ್ಥಿ ವಿಳಾಸ ಸಮೇತ, ಮೆರಿಟ್‌ವಾರು ವಿವರವಾದ ಮಾಹಿತಿ ನೀಡುವುದು) | ಈ ಅಧಿಸೂಚನೆಯನ್ವಯ 38344 ಜನರು ಅರ್ಜಿ ಸಲ್ಲಿಸಿದ್ದರು: ಇವರಲ್ಲಿ 33281 ಪರೀಕ್ಷೆಗೆ ಹಾಜರಾಗಿರುತ್ತಾರೆ. ಸದರಿ ಅಧಿಸೂಚನೆಯನ್ನು ರದ್ದುಗೊಳಿಸಲಾಗಿರುತ್ತದೆ. ಆದುದರಿಂದ ಮೆರಿಟ್ ಪಟ್ಟಿ ಪ್ರಕಟಿಸಿರುವುದಿಲ್ಲ. |
| ಇ) | ಮೆರಿಟ್ ಪಟ್ಟಿ ಪ್ರಕಟಿಸುವ ಮುನ್ನ ಈ ಅಧಿಸೂಚನೆಯನ್ನು ರದ್ದುಗೊಳಿಸಲು ಕಾರಣಗಳೇನು: ಇದರಿಂದ ಆಯ್ಕೆಗೊಂಡ ಅಭ್ಯರ್ಥಿಗಳ ಭವಿಷ್ಯವೇನು; (ವಿವರವಾದ ಮಾಹಿತಿ ನೀಡುವುದು) | ಭಾರತವು ಸೇರಿದಂತೆ ವಿಶ್ವದಲ್ಲಿ ಕೋವಿಡ್-19 ವೈರಸ್‌ನಿಂದ ಉಂಟಾದ ಸಾಂಕ್ರಾಮಿಕ ರೋಗದ ಹಿನ್ನಲೆಯಲ್ಲಿ ಮಾರ್ಚ್ 2020ರಿಂದ ದೇಶದಾದ್ಯಂತ ಲಾಕ್‌ಡೌನ್ ಘೋಷಣೆಯಾದ ಹಿನ್ನಲೆಯಲ್ಲಿ ಸರ್ಕಾರದ ಆದೇಶಗಳ ಅನ್ವಯ ಮೆಟ್ರೋ ರೈಲು ಕಾರ್ಯಾಚರಣೆಯನ್ನು ಸಂಪೂರ್ಣವಾಗಿ ನಿಲ್ಲಿಸಿದ್ದರಿಂದ ತೀವ್ರ ಆದಾಯದ ಕೊರತೆ ಉಂಟಾಗಿರುತ್ತದೆ. ಸಂಸ್ಥೆಯ ಆರ್ಥಿಕ ಸ್ಥಿತಿಯನ್ನು ಪರಿವೀಕ್ಷಿಸಿ ಯಾವುದೇ ಹೆಚ್ಚುವರಿ ನೇಮಕಾತಿಯ ಅವಶ್ಯಕತೆ ಕಂಡು ಬಂದಿಲ್ಲವಾದ್ದರಿಂದ, ಸದರಿ ಅಧಿಸೂಚನೆಯನ್ನು ರದ್ದುಗೊಳಿಸಲಾಗಿರುತ್ತದೆ. |
| ಈ) | ರದ್ದುಗೊಳಿಸಿರುವ ಅಧಿಸೂಚನೆಯನ್ನು ಹಿಂಪಡೆದು ಈ ಅಭ್ಯರ್ಥಿಗಳಿಗೆ ಯಾವ ಕಾಲಮಿತಿಯಲ್ಲಿ ನೇಮಕಾತಿ ನೀಡಲಾಗುವುದು: | ಸಂಸ್ಥೆಯು ಈಗಾಗಲೇ ಅಧಿಸೂಚನೆಯನ್ನು ರದ್ದುಗೊಳಿಸಲಾಗಿದ್ದು, ಅರ್ಜಿ ಹಾಕಿದ ಎಲ್ಲರಿಗೂ ಅರ್ಜಿ ಮೊತ್ತವನ್ನು ಹಿಂತಿರುಗಿಸಲಾಗಿದೆ. ಮೆರಿಟ್ ಪಟ್ಟಿ ಪ್ರಕಟಿಸಿರುವುದಿಲ್ಲ. ಸದರಿ ಅಭ್ಯರ್ಥಿಗಳು ಸಂಸ್ಥೆಯ ಮುಂದಿನ ಅಧಿಸೂಚನೆಯಲ್ಲಿ ಪಾಲ್ಗೊಳ್ಳಬಹುದು. |
| ಉ) | ಮೆಟ್ರೋ ನಿಗಮವು ಈ ಅಭ್ಯರ್ಥಿಗಳ ಖಾಯಂ ನೇಮಕಾತಿಯನ್ನು ಕೈಬಿಟ್ಟು ಹೊರಗುತ್ತಿಗೆ ನೇಮಕಾತಿಯನ್ನು ಮಾಡಿ ಕೊಳ್ಳುತ್ತಿರುವುದು ನ್ಯಾಯ ಸಮ್ಮತವೇ? (ವಿವರವಾದ ಮಾಹಿತಿ ನೀಡುವುದು) | ಬೆಂಗಳೂರು ಮೆಟ್ರೋ ರೈಲು ನಿಗಮವು ಆರಂಭದಿಂದಲೂ ಮೂಲ ಸೇವೆಗಳ ಹೊರತುಪಡಿಸಿ ಇತರೆ ಸೇವೆಗಳಿಗೆ (non-core services) ಹೊರಗುತ್ತಿಗೆ ಮೂಲಕ ಪಡೆಯುತ್ತಿದೆ. ಸಂಸ್ಥೆಯ ಕಾರ್ಯಾಚರಣೆಯ ಕಾರ್ಯಸಾಧ್ಯತೆಯನ್ನು ಗಮನದಲ್ಲಿಟ್ಟುಕೊಂಡು ಇದನ್ನು ಮಾಡಲಾಗುತ್ತದೆ. |

ಕಡತ ಸಂಖ್ಯೆ: ನಅಇ 56 ಪಿ.ಆರ್.ಜೆ 2022

(ಬಸವರಾಜ್ ಬೊಮ್ಮಾಯಿ)
ಮುಖ್ಯಮಂತ್ರಿ